October 2022
ವಿತ್ತ ಸಂಚಿಕೆ

# INSPIRE INDIA

## ಸಲಹೆ ನಮ್ಮದು ಹೂಡಿಕೆ ನಿಮ್ಮದು



ಶರಣ್ ಪಾಟೀಲ್
ಆರ್ಥಿಕ ತಜ್ಞ

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com




ವ್ಯಾಪಾರದಲ್ಲಿ ಅವಕಾಶಗಳೆಂದರೆ ಬಸ್ ಇದ್ದಂತೆ. ನಿಮ್ಮ ಹಿಂದೆ ಯಾವತ್ತೂ ಇನ್ನೊಂದು ಬಸ್ ಫಾಲೋ ಮಾಡುತ್ತಿರುತ್ತದೆ.

–ರಿಚರ್ಡ್ ಬ್ರಾಸನ್



ಒಬ್ಬ ಹೂಡಿಕೆದಾರರನಿಗೆ ಇರಬೇಕಾದ ಗುಣವೆಂದರೆ ಕೇವಲ ಬುದ್ಧಿವಂತಿಕೆಯಲ್ಲ, ಎಲ್ಲವನ್ನೂ ನಿಭಾಯಿಸುವ ಮನೋಧರ್ಮ.

–ವಾರೆನ್ ಬಫೆಟ್



ನೀವು ನಿಮ್ಮ ಮಕ್ಕಳಿಗೆ ನೀಡಬಹುದಾದ ಬಹುದೊಡ್ಡ ಕೊಡುಗೆ ಎಂದರೆ ಹಣಕಾಸಿನ ಜವಾಬ್ದಾರಿಯನ್ನು ಅರ್ಥ ಮಾಡಿಸುವುದು.

–ಡೆನಿಸ್ ವೇಟ್ಲಿ

## ಒಳ ಪುಟ ನೋಟ

ಮಕ್ಕಳಿಗೂ ಕಲಿಸಿ **ಕಾಸಿನ ಲೆಕ್ಕ** 3



**ಅಗ್ನಿ ವಿಮಾ ಪಾಲಿಸಿ:** ಸುಡದಿರಲಿ ನಿಮ್ಮ ಸಂಪತ್ತು 5






# ದುರಾಸೆ-ಭಯಕ್ಕಿಲ್ಲ ಕಿಮ್ಮತ್ತು

ಹಣ ಮತ್ತು ಹೂಡಿಕೆಯ ವಿಚಾರ ಬಂದಾಗ ನಾವು ಯಾವತ್ತೂ ತರ್ಕಬದ್ಧವಾಗಿ ಯೋಚನೆ ಮಾಡುವುದಿಲ್ಲ. "ಮಾರುಕಟ್ಟೆಯಲ್ಲಿ ಕುಸಿತ" ಎಂಬ ಪದ ಕೇಳಿದ ತಕ್ಷಣ ಷೇರುಪೇಟೆಯಲ್ಲಿ ಕರಡಿ ಕುಣಿತದ ಚಿತ್ರಗಳು ಅನೇಕ ಹೂಡಿಕೆದಾರರ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಬಂದುಬಿಡುತ್ತವೆ. 'ಕುಸಿದಾಗ ಖರೀದಿಸಿ ಮತ್ತು ಏರಿದಾಗ ಮಾರಿ!' ಇದು ಪ್ರತಿಯೊಬ್ಬರೂ ಇಷ್ಟಪಡುವ ಷೇರು ಮಾರುಕಟ್ಟೆಯ ಮಂತ್ರ. ಆದರೆ ಅದನ್ನು ಎಲ್ಲರೂ ಅನುಸರಿಸುತ್ತಾರೆಯೇ? ಇಲ್ಲ. ಯಾಕೆ ಹೀಗಾಗುತ್ತಿದೆ? ಯಾಕೆಂದರೆ ನಾವು ನಮ್ಮ ಭಾವನೆಗಳಿಗೆ ಬಹುಬೇಗ ಬಲಿಪಶು ಆಗಿಬಿಡುತ್ತೇವೆ.

"ಹಣಕಾಸು ಮಾರುಕಟ್ಟೆಯನ್ನು ಆಟವಾಡಿಸುವ ಎರಡು ಬಹುಮುಖ್ಯ ಭಾವನೆಗಳೆಂದರೆ "ದುರಾಸೆ ಮತ್ತು ಭಯ" ಎಂಬ ವಾಲ್ ಸ್ಟ್ರೀಟ್‌ನ ಹಳೆಯ ಮಾತು ಕಾಲಕಾಲಕ್ಕೂ ಪ್ರಸ್ತುತ ಅನಿಸುತ್ತದೆ. ಈ ಎರಡು ಭಾವನೆಗಳು ನಮ್ಮ ಜೀವನದಲ್ಲಿಯೂ ಹಾನಿ ಉಂಟುಮಾಡಬಹುದು, ನಮ್ಮ ಬಂಡವಾಳಪಟ್ಟಿಯನ್ನು ಕೂಡ ಹಾಳುಗೆಡವಬಹುದು. ಭಯ ಮತ್ತು ದುರಾಸೆಯ ಮೇಲೆಯೇ ಹೂಡಿಕೆದಾರರ ನಡವಳಿಕೆಯೂ ನಿಂತಿದೆ. ಗೂಳಿಯ ಹೂಂಕಾರದಿಂದಾಗುವ ಏರಿಕೆ ಮತ್ತು ಅದಕ್ಕೆ ತಕ್ಕಂತೆ ಕರಡಿಯ ಕುಣಿತದಿಂದಾಗುವ ಕುಸಿತಕ್ಕೂ ಕೂಡ ಇದೇ ಕಾರಣ. ನಡವಳಿಕೆಗೆ ಸಂಬಂಧಿಸಿದ ಹಣಕಾಸನ್ನು 'ದುರಾಸೆ ಮತ್ತು ಭಯದ ಸೈಕಲ್' ಎಂದು ಕರೆಯಲಾಗುತ್ತದೆ. ಆದರೆ ನಿಮ್ಮ ಹೂಡಿಕೆಯ ನಡವಳಿಕೆಯ ಮೇಲೆ ಇವೆರಡೂ ಪರಿಣಾಮ ಬೀರದೇ ಹೋದರೆ ನೀವು ನಿಮ್ಮ ಹಣಕಾಸು ಗುರಿಯನ್ನು ತಲುಪುವಲ್ಲಿ ಹೆಚ್ಚು ಸಫಲತೆಯನ್ನು ಕಾಣುತ್ತೀರಿ. ಅಷ್ಟಕ್ಕೂ ಇವೆಲ್ಲ ಸುಲಭದ ಮಾತೇನೂ ಅಲ್ಲ. ಹಣಕಾಸಿನ

**ಜ್ಞಾನ, ಅನುಭವ, ಗಟ್ಟಿಯಾದ ನಿರ್ಧಾರ ಮತ್ತು ಅತ್ಯುತ್ತಮವಾದ ಹೂಡಿಕೆ ಯೋಜನೆ ನಿಮ್ಮ ಬಳಿ ಇದ್ದರೆ ಅತ್ಯಂತ ವಿವೇಚನೆಯಿಂದ ಹೂಡಿಕೆ ಮಾಡಲು ಸಾಧ್ಯ.**



ವಿಚಾರದಲ್ಲಿ ಇವು ನಮ್ಮ ಮನಸ್ಸಿನ ಮೇಲೆ ಹೇಗೆ ಪ್ರಾಯೋಗಿಕವಾಗಿ ಪರಿಣಾಮ ಬೀರುತ್ತವೆ ಎಂಬುದನ್ನು ನೋಡೋಣ.

**ದುರಾಸೆಯ ಪ್ರಭಾವ:** ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ನಾವು ಬಹಳ ಬೇಗ ಶ್ರೀಮಂತರಾಗಬೇಕು ಎಂಬ ಆಸೆ ಇರುತ್ತದೆ. ಇದಕ್ಕೆ ಹೂಡಿಕೆದಾರರೇನೂ ಹೊರತಲ್ಲ. ಅತ್ಯಲ್ಪ ಅವಧಿಯಲ್ಲಿ ಲಾಭ ಗಳಿಸುವ ಬಹುದೊಡ್ಡ ಅವಕಾಶವನ್ನು ಷೇರು ಮಾರುಕಟ್ಟೆಯೂ ನಿಮಗೆ ಒದಗಿಸುತ್ತದೆ. ಷೇರುಪೇಟೆಯಲ್ಲಿ ತೊಡಗಿಸಿಕೊಂಡಿರುವ ಅನೇಕ ಹೂಡಿಕೆದಾರರು ಈ ಬಲೆಗೆ ಬಿದ್ದೂ ಬಿಡುತ್ತಾರೆ. ಬೆಲೆಗಳು ಏರುಮುಖವಾಗಿದ್ದಾಗ ಹೆಚ್ಚು ಹೆಚ್ಚು ಜನರು ಈಕ್ವಿಟಿಗಳಲ್ಲಿ ಹೆಚ್ಚು ಹೆಚ್ಚು ಹೂಡಿಕೆಗಳನ್ನು ಮಾಡುತ್ತಾ ಹೋಗುತ್ತಾರೆ. ಅತಿ ಹೆಚ್ಚಿನ ಬೇಡಿಕೆ ಮತ್ತು ಅಧಿಕ ಹಣದ ಹರಿವಿನೊಂದಿಗೆ ಬೆಲೆಗಳಲ್ಲಿ ಇನ್ನಷ್ಟು ಏರಿಕೆಯನ್ನು ಕಂಡು ಲಾಭವೂ ಹೆಚ್ಚುತ್ತದೆ. ಹೀಗೆ ಯಾವಾಗ ಲಾಭ ಹೆಚ್ಚಾಯಿತೋ ಅತಿಯಾಸೆಗೆ ಕಿಡಿ ಹಚ್ಚಿದಂತೆ. ಅತಿ ಹೆಚ್ಚು ಹಣವನ್ನು ಹೂಡಿಕೆ ಮಾಡಲು ಶುರುಮಾಡುತ್ತೀರಿ. ಷೇರುಪೇಟೆಯಲ್ಲಿ ಬೆಲೆಗಳ ಏರಿಕೆ ಅತಾರ್ಕಿಕ ಮಟ್ಟ ತಲುಪುತ್ತದೆ. ಬೆಲೆಗಳು ಅತಿಯಾದ ಎತ್ತರವನ್ನು ಏರಿದಾಗ 'ಆಸ್ತಿಯ ಗುಳ್ಳೆಗಳು' ಸೃಷ್ಟಿಯಾಗುತ್ತವೆ. ಅಂದರೆ ಬೆಲೆಗಳು ಆಸ್ತಿಯ ಮೂಲಭೂತ ಮೌಲ್ಯವನ್ನೂ ಮೀರಿ ಎತ್ತರಕ್ಕೆ ಜಿಗಿಯುತ್ತವೆ. ಆಗ ಸಹಜವಾಗಿ ಎದ್ದ ಗುಳ್ಳೆಗಳು ಒಡೆಯುತ್ತವೆ ಮತ್ತು ಮಾರುಕಟ್ಟೆ ಪತನದ ದಾರಿ ಹಿಡಿಯುತ್ತದೆ. ಮಾರುಕಟ್ಟೆ ಕುಸಿತವನ್ನು ಕಂಡಾಗ ಯಾರು ಅತ್ಯಂತ ಹೆಚ್ಚಿನ ದರದಲ್ಲಿ ಷೇರುಗಳನ್ನು ಖರೀದಿ ಮಾಡಿರುತ್ತಾರೋ ಅಂತಹ ಹೂಡಿಕೆದಾರರು ನಷ್ಟವನ್ನು ಅನುಭವಿಸುತ್ತಾರೆ.

ಇಂತಹ ಕಾಲಘಟ್ಟದಲ್ಲಿ ಹೂಡಿಕೆಯ ಮೂಲಭೂತ ಅಂಶಗಳ ಕಡೆಗೆ ಹೆಚ್ಚು ಗಮನವನ್ನು ನೀಡುವುದು ಮುಖ್ಯ; ಸುದೀರ್ಘಾವಧಿ ದೃಷ್ಟಿಕೋನವನ್ನು ಕಾಯ್ದುಕೊಳ್ಳುವುದು, ಅಪೇಕ್ಷಿತ ಆಸ್ತಿ ಹಂಚಿಕೆಯಲ್ಲಿ ಪುನರ್ರಚನೆ ಮಾಡುವುದು ಮತ್ತು ಹಿಂಡಿನ ಅಥವಾ ಗುಂಪಿನ ಮಾತನ್ನು ನಿರ್ಲಕ್ಷ್ಯ ಮಾಡುವುದು. ಇಂತಹ ಗುಂಪು ಷೇರುಗಳನ್ನು ಖರೀದಿ ಮಾಡುತ್ತಿದೆಯೋ ಅಥವಾ ಮಾರಾಟ ಮಾಡುತ್ತಿದೆಯೋ ಎನ್ನುವ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳದೇ ಇರುವುದು.

**ಭಯದ ಪ್ರಭಾವ:** ದುರಾಸೆ ಮತ್ತು ಭಯ ಒಂದೇ ನಾಣ್ಯದ ಎರಡು ಮುಖಗಳು. ಅತಿಯಾದ ಆಸೆ ಮಾರುಕಟ್ಟೆಯನ್ನು ಹೇಗೆ ನಾಶಮಾಡಬಹುದೋ ಹಾಗೇ, ಅದು ಭಯದಿಂದಲೂ ಮುಗ್ಗರಿಸಿಬಿಡಬಹುದು. ಷೇರಿನ ಬೆಲೆಗಳು ತೀವ್ರವಾಗಿ ಕುಸಿದುಬಿದ್ದಾಗ ಅವು ಇನ್ನಷ್ಟು ಆಳಕ್ಕೆ ಇಳಿದುಬಿಡುತ್ತವೆ ಎಂಬ ಭಯಕ್ಕೆ ಒಳಗಾಗಿ ಮಾರಾಟ ಮಾಡಲು ಶುರುಮಾಡಿಕೊಳ್ಳುತ್ತಾರೆ. ಹೀಗೆ ಭಯಪೀಡಿತ ಮಾರಾಟದಿಂದ ಷೇರು ಬೆಲೆಗಳೂ ಪತನದ ಹಾದಿ ಹಿಡಿಯುತ್ತವೆ. ಅಂತಿಮವಾಗಿ ಬೆಲೆಗಳು ಅತಾರ್ಕಿಕ ಮಟ್ಟಕ್ಕೆ ಕುಸಿಯುತ್ತವೆ ಮತ್ತು ಮಾರುಕಟ್ಟೆ ತಳಕಚ್ಚುತ್ತದೆ. ಇತ್ತೀಚೆಗೆ ಕೋವಿಡ್ ಬಂದು ವಕ್ಕರಿಸಿಕೊಂಡ ಆರಂಭಿಕ ಹಂತದಲ್ಲಿ ಮಾರುಕಟ್ಟೆ ಒತ್ತಡಕ್ಕೆ ಒಳಗಾಗಿತ್ತು. ಇದರಿಂದ ಎಲ್ಲರೂ ಭಯಭೀತರಾದರು ಮತ್ತು ತಮ್ಮಲ್ಲಿದ್ದ ಷೇರುಗಳನ್ನೆಲ್ಲ ಮಾರಾಟ ಮಾಡಲು ಆರಂಭಿಸಿದರು. ಇದರ ಫಲ ಏನಾಯಿತು? ಮಾರುಕಟ್ಟೆ ಹೇಗೆ ಮಹಾಪತನಕ್ಕೆ ಸಾಕ್ಷಿಯಾಯಿತು ಎಂಬುದು ಈಗ ಇತಿಹಾಸ.

ಮಾರುಕಟ್ಟೆ ಉತ್ಕೃಷ್ಟ ಸ್ಥಿತಿಯಲ್ಲಿದ್ದಾಗ ದುರಾಸೆ ಹೇಗೆ ತನ್ನ ಪ್ರಾಬಲ್ಯವನ್ನು ಸಾಧಿಸುತ್ತದೋ ಅದು ತಳಕಚ್ಚಿದಾಗ ಭಯ ನೆಲೆಗೊಳ್ಳುತ್ತದೆ. ನಷ್ಟದ ಪ್ರಮಾಣವನ್ನು ತಗ್ಗಿಸಿಕೊಳ್ಳುವ ಸಲುವಾಗಿ ಹೂಡಿಕೆದಾರರು ತಕ್ಷಣ ಷೇರುಗಳನ್ನು ಮಾರಾಟ ಮಾಡಿ ಸುರಕ್ಷಿತ ಆಸ್ತಿಗಳಾದ ಹಣಕಾಸು–ಮಾರುಕಟ್ಟೆ ಸೆಕ್ಯುರಿಟಿಗಳು ಮತ್ತು ಪ್ರಧಾನ–ಸುರಕ್ಷಿತ ನಿಧಿಗಳು ಇತ್ಯಾದಿಗಳನ್ನು ಖರೀದಿ ಮಾಡುತ್ತಾರೆ. ಇವುಗಳಲ್ಲಿ ಅಪಾಯದ ಪ್ರಮಾಣ ಕಡಿಮೆ ಆದರೆ ಆದಾಯವೂ ಕಡಿಮೆ. ಇಂತಹ ಸಂದರ್ಭದಲ್ಲಿ ಲಭ್ಯವಿರುವ ಬಹುತೇಕ ಅವಕಾಶಗಳ ಲಾಭ ಪಡೆದುಕೊಳ್ಳುವ ಬದಲಿಗೆ ಜನರು ಈಕ್ವಿಟಿಗಳಿಂದ ಮುಕ್ತಿ ಪಡೆದು ಕಾಲ್ಪನಿಕ ನಷ್ಟಗಳನ್ನು ನಿಜವಾದ ನಷ್ಟಗಳಾಗಿ ಪರಿವರ್ತಿಸಿಕೊಳ್ಳುತ್ತಾರೆ.

**ಭಯ–ದುರಾಸೆಯ ಮೇಲೆ ಸವಾರಿ ಮಾಡಿ:** "ತಮ್ಮ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗದೇ ಇದ್ದವರು ಹೂಡಿಕೆ ಪ್ರಕ್ರಿಯೆಗಳಿಂದ ಲಾಭ ಮಾಡಿಕೊಳ್ಳಲು ಸಾಧ್ಯವಿಲ್ಲ"– ಬೆಂಜಮಿನ್ ಗ್ರಹಾಂ.

ಇಂತಹ ಏರಿಳಿತ ಸಂಭವಿಸಿದಾಗ ಭಯ ಮತ್ತು ದುರಾಸೆ ಷೇರುಪೇಟೆಯ ಅವಿಭಾಜ್ಯ ಅಂಗವಾಗುತ್ತದೆ. ನಷ್ಟಗಳ ಕಾರಣಕ್ಕೆ ಅಥವಾ ಮಾರುಕಟ್ಟೆಯ ಅಸ್ಥಿರತೆಯಿಂದಾಗಿ ಹೂಡಿಕೆದಾರರು ತಮ್ಮ ಆರಾಮ ವಲಯದ ವ್ಯಾಪ್ತಿಯಿಂದ ತಮ್ಮನ್ನು ತಾವು ಹೊರಗೆ ಇಟ್ಟುಕೊಂಡಾಗ ಅವರು ಇಂತಹ ಭಾವನಾತ್ಮಕ ಸನ್ನಿವೇಶಗಳಿಗೆ ಬಲಿಯಾಗುತ್ತಾರೆ. ಇದರಿಂದಾಗಿ ಅತ್ಯಂತ ದುಬಾರಿ ತಪ್ಪುಗಳು ಉಂಟಾಗುತ್ತವೆ.

ನೀವು ಮಾರುಕಟ್ಟೆಯನ್ನು ನಿಯಂತ್ರಿಸಲು ಸಾಧ್ಯವಾಗದೇ ಇದ್ದರೂ ನಿಮ್ಮ ಕ್ರಮಗಳನ್ನು ನಿಯಂತ್ರಿಸಬಹುದು. ಷೇರುಪೇಟೆಯಲ್ಲಿ ಅಥವಾ ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಲಾಭ ಗಳಿಸುತ್ತೀರೋ ಅಥವಾ ನಷ್ಟ ಹೊಂದುತ್ತೀರೋ ಎಂಬುದನ್ನು ನಿಮ್ಮ ಕೈಗೊಳ್ಳುವ ಕ್ರಮಗಳೇ ನಿರ್ಧರಿಸುತ್ತವೆ. ಆಯಾ ದಿನ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿರುವ ಸಂಗತಿಗಳಲ್ಲಿ ಸಿಕ್ಕಿಹಾಕಿಕೊಳ್ಳುವುದನ್ನು ತಪ್ಪಿಸಿ. ಅದು ಅತಾರ್ಕಿಕವಾದ ಭಯ ಮತ್ತು ದುರಾಸೆಗಳಿಂದಾಗಿ ಆಗಿರಬಹುದು. ಯಾವತ್ತೂ ಷೇರುಗಳ ಮೂಲಭೂತ ಅಂಶಗಳಿಗೆ ಅಂಟಿಕೊಳ್ಳುವುದನ್ನು ಕರಗತ ಮಾಡಿಕೊಳ್ಳಿ. ಈ ಎಲ್ಲ ಅಂಶಗಳು ಹೇಳಿಕೊಂಡಷ್ಟು ಸುಲಭವೇನೂ ಅಲ್ಲ. ನೀವು ನಿಮ್ಮ ಭಾವನೆಗಳನ್ನು ನಿಯಂತ್ರಣ ಮಾಡಿಕೊಳ್ಳುವುದು ಹೇಗೆ, ಅದಕ್ಕೆ ದಾರಿಗಳು ಯಾವುವು ಎಂಬುದನ್ನು ಗಮನಿಸಬೇಕು. ಭಯ ಮತ್ತು ಅತಿಯಾಸೆ ನೀವು ಕೈಗೊಳ್ಳುವ ವ್ಯಾಪಾರದ ನಿರ್ಧಾರಗಳ ಮೇಲೆ ಅಥವಾ ಒಟ್ಟಾರೆ ಯಶಸ್ಸಿನ ಮೇಲೆ ಪರಿಣಾಮ ಬೀರದಂತೆ ಎಚ್ಚರಿಕೆಯನ್ನು

ವಹಿಸಬೇಕು.

**ನಿರ್ದಿಷ್ಟ ಯೋಜನೆ ಇರಲಿ:** ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವ ಸಂದರ್ಭದಲ್ಲಿ ನಿರ್ದಿಷ್ಟವಾದ ಯೋಜನೆ ಇರಲಿ ಮತ್ತು ಅದಕ್ಕೆ ಅಂಟಿಕೊಂಡಿರಿ. ಯಾವುದೇ ಭಾವನಾತ್ಮಕ ಉದ್ವೇಗಕ್ಕೆ ಒಳಗಾಗದೇ ನಿಮ್ಮ ಯೋಜನೆಯನ್ನು ಅದು ವಿಚಲಿತಗೊಳಿಸದ ಹಾಗೆ ಎಚ್ಚರಿಕೆಯನ್ನು ವಹಿಸಿ. ಮಾರುಕಟ್ಟೆ ಏರುಮುಖದಲ್ಲಿ ಸಾಗಲಿ ಅಥವಾ ಪತನದ ಹಾದಿ ಹಿಡಿದಿರಲಿ ನೀವು ಮಾತ್ರ ನಿಮ್ಮ ಹೂಡಿಕೆ ಯೋಜನೆ ಮತ್ತು ನಿಮ್ಮ ಆಸ್ತಿ ಹಂಚಿಕೆಯನ್ನು ಬಿಟ್ಟು ಕದಲದಿರಿ. ಹೂಡಿಕೆದಾರರು ನಿರ್ದಿಷ್ಟವಾದ ಯೋಜನೆ ಇಲ್ಲದೇ ಅತ್ಯಂತ ಕಳಪೆಯಾಗಿ ಪ್ರವೇಶ ಮತ್ತು ನಿರ್ಗಮನದ ನಿರ್ಧಾರಗಳನ್ನು ಕೈಗೊಳ್ಳಬಹುದು. ಇದಕ್ಕೆ ಏರಿಕೆಯಾದಾಗ ದುರಾಸೆ ಮತ್ತು ಕುಸಿತವಾದಾಗ ಭಯದಂತಹ ಭಾವನೆಗಳು ಕಾರಣವಾಗಿರಬಹುದು. ನಿಮ್ಮ ಹೂಡಿಕೆಯ ಮಾರುಕಟ್ಟೆ ಮೌಲ್ಯ ಏರಬಹುದು, ಕುಸಿಯಬಹುದು ಮತ್ತೆ ಏರಬಹುದು. ನಿಮ್ಮ ಆಸ್ತಿ ಹಂಚಿಕೆಯನ್ನು ಮತ್ತೆ ಸಮತೋಲನಕ್ಕೆ ತರುವುದು ಮತ್ತು ಶಿಸ್ತಿನಿಂದ, ತಾಳ್ಮೆಯಿಂದ ಇರುವುದನ್ನು ಬಿಟ್ಟು ಬೇರೆ ಏನನ್ನೂ ಮಾಡದೇ ಸುಮ್ಮನಿರುವುದು ಅತ್ಯುತ್ತಮ ಆಯ್ಕೆಯಾಗಿರುತ್ತದೆ.

**ಶೀಘ್ರ ಸಿರಿವಂತನಾಗುವ ಯೋಚನೆ ಬಿಟ್ಟುಬಿಡಿ:** ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯನ್ನು ಮಾಡಿದರೆ ಬಹುಬೇಗ ಶ್ರೀಮಂತನಾಗಬಹುದು ಎಂಬ ಮಿಥ್ಯೆ ಇದೆ. ಸಂಪತ್ತನ್ನು ಬೆಳೆಸಲು ಈಕ್ವಿಟಿಗಳು ಅತ್ಯುತ್ತಮ. ಆದರೆ ಸುದೀರ್ಘಾವಧಿಯಲ್ಲಿ ಮಾತ್ರ. ನೀವು ಹೂಡಿದ ಹಣ ಅನೇಕ ಪಟ್ಟು ಬೆಳೆಯಬೇಕಾದರೆ ತಾಳ್ಮೆಯಿಂದ ಕಾಯಬೇಕು. ಅತಿಯಾದ ಆಸೆಯ ಪಾಶಕ್ಕೆ ಒಳಗಾಗಿ ಇನ್ನೊಂದು ದೊಡ್ಡ ಸ್ಟಾಕ್‌ನ ಸೆಳೆತಕ್ಕೆ ಒಳಗಾಗಬೇಡಿ ಅಥವಾ ನಿಮ್ಮ ಸ್ನೇಹಿತರು ಮತ್ತು ಸಹ–ಹೂಡಿಕೆದಾರರಿಂದ ದೊರೆಯುವ ಸಲಹೆಗಳ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ. ಯಾವುದೇ ಜ್ಞಾನವಿಲ್ಲದೇ ಅಲ್ಪಾವಧಿಯಲ್ಲಿ ಹೆಚ್ಚು ಹಣ ಮಾಡಬೇಕು ಎಂಬ ಕಾರಣಕ್ಕೆ ಅತಿಯಾದ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವುದು, ಟ್ರೇಡಿಂಗ್ ಮಾಡುವುದು, ಫ್ಯುಚರ್ ಮತ್ತು ಆಪ್ಶನ್‌ಗಳೊಂದಿಗೆ ಆಟವಾಡುವುದರಿಂದ ವರ್ಷಗಳಿಂದ ಮಾಡಿದ ಶ್ರಮ ಕೆಲವೇ ದಿನಗಳಲ್ಲಿ ನಾಶವಾಗಿ ಹೋಗಬಹುದು.

ಒಬ್ಬ ಹೂಡಿಕೆದಾರನಾಗಿ ನೀವು ಮಾಡಿದ ಹೂಡಿಕೆಯ ಮತ್ತು ಅದರ ಸಂಯೋಜನೆ ಹೇಗಿದೆ ಎಂಬುದನ್ನು ಆಗಾಗ ಗಮನಿಸುತ್ತಿರಬೇಕು. ಅದು ತಿಂಗಳಿಗೊಮ್ಮೆ ಆಗಿರಬಹುದು ಅಥವಾ ಮಾರುಕಟ್ಟೆಯ ತೀವ್ರತರದ ಏರುಪೇರುಗಳಾದಾಗ ಆಗಿರಬಹುದು. ಹಾಗಂತ ನಿಮ್ಮ ಮ್ಯುಚ್ಯುಯಲ್ ಫಂಡ್ ಯೋಜನೆಗಳು ಅಥವಾ ಷೇರುಗಳ ಬಗ್ಗೆ ದಿನವೂ ಜಾಡು ಹಿಡಿದು ನೋಡಬೇಕಾದ ಅಗತ್ಯವಿರುವುದಿಲ್ಲ. ಕಾಲಕಾಲಕ್ಕೆ ನೀವು ನಿಮ್ಮ ಹೂಡಿಕೆಗಳ ಮೌಲ್ಯಮಾಪನವನ್ನು ಮಾಡುವುದರಿಂದ ನಿಮ್ಮ 'ರಿಸ್ಕ್ ಪ್ರೊಫೈಲ್' ಹೇಗಿದೆ ಮತ್ತು ನೀವು ಯೋಜಿಸಿದ ಗುರಿಗಳನ್ನು ತಲುಪಲು ಸಾಧ್ಯವಾಗುತ್ತಿದೆಯೇ ಎಂಬ ಚಿತ್ರಣ ನಿಮಗೆ ಲಭ್ಯವಾಗುತ್ತದೆ. ಇದರಿಂದ ನೀವು ನಿಮ್ಮ ಭಾವನೆಗಳನ್ನು ಪಕ್ಕಕ್ಕಿಟ್ಟು ವಿಶ್ಲೇಷಣಾತ್ಮಕ ನಿರ್ಧಾರಗಳನ್ನು ಮಾಡಲು ಸಹಾಯವಾಗುತ್ತದೆ. ಇದರ ಜೊತೆ ಜೊತೆಗೇ ಅಗತ್ಯವೆನಿಸಿದರೆ ನಿಮ್ಮ ಹೂಡಿಕೆ ಪಟ್ಟಿಗಳನ್ನು ಮರುಸಮತೋಲನ ಮಾಡಲು ಸಾಧ್ಯವಾಗುತ್ತದೆ.

**ಕಲಿಕೆ ನಿರಂತರ:** ಹೂಡಿಕೆಗಳ ವಿಚಾರ ಬಂದಾಗ ಯಾರ ಜ್ಞಾನವೂ ಕೂಡ ಪರಮೋನ್ನತ ಎಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಅದು ಹೂಡಿಕೆಯ ಉತ್ಪನ್ನಗಳು, ವಿಮೆ, ತೆರಿಗೆ, ಎಸ್ಟೇಟ್ ಯೋಜನೆ ಹೀಗೆ ಅನೇಕ ವಿಚಾರಗಳಲ್ಲಿ ಕಲಿಕೆ ಎನ್ನುವುದು ನಿರಂತರ. ಒಗಟುಗಳನ್ನು, ಕಗ್ಗಂಟಿನ ಸ್ಥಿತಿಯನ್ನು ಒಡೆಯುವ, ಬಗೆಹರಿಸುವುದನ್ನು ಕಲಿಯಬೇಕು. ಮಾರುಕಟ್ಟೆಯಲ್ಲಿ ಎದ್ದಿರುವ ಗದ್ದಲದ ಒಳನೋಟ ತಿಳಿಯುವ ಪ್ರಯತ್ನ ಮಾಡಿ. ಎಲ್ಲಕ್ಕಿಂತ ಮುಖ್ಯವಾಗಿ ಇತರರು ಮಾಡಿದ ತಪ್ಪುಗಳಿಂದ ಮತ್ತು ಸಾಂಪ್ರದಾಯಿಕ ಸಂಪತ್ತು ಸೃಷ್ಟಿದಾರರು ಮತ್ತು ಹೂಡಿಕೆದಾರರ ಅನುಭವಗಳಿಂದ ಕಲಿಯುವ ಪ್ರಯತ್ನ ಮಾಡಿ. ಜೊತೆಗೆ ದಿನದ ಇಪ್ಪತ್ತನಾಲ್ಕು ಗಂಟೆಯೂ ಪ್ರಸಾರ ಮಾಡುವ ಮತ್ತು ಮಾರುಕಟ್ಟೆಯ ವಿಚಾರದಲ್ಲಿ ನಿಮ್ಮ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುವ ನ್ಯೂಸ್ ಚಾನೆಲ್‌ಗಳಿಂದ ದೂರ ಉಳಿದುಬಿಡಿ. ಉಳಿದವರು ಮಾಡುವುದನ್ನು ಕಣ್ಮುಚ್ಚಿ ಅನುಸರಿಸುವುದಕ್ಕಿಂತ ಭಿನ್ನವಾದ ಕಾರ್ಯತಂತ್ರ ಯಾವುದಿದೆ ಎಂಬುದರ ಬಗ್ಗೆ ಪರಿಶೋಧನೆ ಮಾಡಿ. ಹಣಕಾಸಿನ ಪಯಣದಲ್ಲಿ ಇನ್ನಷ್ಟು ಗಟ್ಟಿಯಾಗಲು ನಿಮ್ಮದೇ ಅನುಭವಗಳಿಂದ ಪಾಠ ಕಲಿಯುವ ಪ್ರಯತ್ನಮಾಡಿ.

**ಕೊನೆಯ ಮಾತು:** ಏರುಪೇರು ಎನ್ನುವುದು ಷೇರು ಮಾರುಕಟ್ಟೆಯ ಅವಿಭಾಜ್ಯ ಅಂಗ. ಇಲ್ಲಿ ಹೂಡಿಕೆ ಮಾಡಿದವನು ಇದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಹಾಗಂತ ನೀವು ದುರಾಸೆ–ಭಯದಂತಹ ಭಾವನಾತ್ಮಕ ಸನ್ನಿವೇಶಗಳಿಗೆ ಬಂದಿಯಾದರೆ ತಪ್ಪುಗಳನ್ನು ಮಾಡುವ ಸಾಧ್ಯತೆಗಳೇ ಅಧಿಕ. ಇಂತಹ ಭಾವನೆಗಳಿಗೆ ಅವಕಾಶ ಕೊಡದೇ ಹೂಡಿಕೆ ಮಾಡುವುದು ನಿಜಕ್ಕೂ ಸವಾಲಿನ ಕೆಲಸ. ಜ್ಞಾನ, ಅನುಭವ, ಗಟ್ಟಿಯಾದ ನಿರ್ಧಾರ ಮತ್ತು ಅತ್ಯುತ್ತಮವಾದ ಹೂಡಿಕೆ ಯೋಜನೆ ನಿಮ್ಮ ಬಳಿ ಇದ್ದರೆ ಅತ್ಯಂತ ವಿವೇಚನೆಯಿಂದ ಹೂಡಿಕೆ ಮಾಡಲು ಸಾಧ್ಯ. ಅದನ್ನು ಕಾರ್ಯರೂಪಕ್ಕೆ ತನ್ನಿ. ನೀವು ಮಾಡುವ ಹೂಡಿಕೆಗಳು ಯಶಸ್ವಿಯಾಗಲಿ.

## ಮಕ್ಕಳಿಗೂ ಕಲಿಸಿ

# ಕಾಸಿನ ಲೆಕ್ಕ!



ನಮ್ಮ ಮಕ್ಕಳು ಜೀವನದ ಎಲ್ಲ ಅಂಶಗಳಲ್ಲಿ ವಿಕಸನವನ್ನು ಕಾಣಬೇಕು ಮತ್ತು ಎಲ್ಲ ಪರಿಸ್ಥಿತಿಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳಬೇಕು. ಒಬ್ಬ ಜವಾಬ್ದಾರಿಯುತ ಪಾಲಕರಾಗಿ ನಾವು ನಮ್ಮ ಮಕ್ಕಳನ್ನು ಪೋಷಿಸುವ ರೀತಿ ಇದಾಗಿರಬೇಕು. ಅದು ನಾವು ಮಕ್ಕಳಿಗೆ ನೀಡುವ ಶಿಕ್ಷಣ, ಬಟ್ಟೆಗಳು, ಆಹಾರ, ಮನರಂಜನೆ ಅಥವಾ ಗ್ಯಾಜೆಟ್‌ಗಳಾಗಿರಲಿ ಅದಕ್ಕಿರುವ ಇನ್ನೊಂದು ಮುಖವನ್ನು ಪರಿಚಯ ಮಾಡಿಸುವಲ್ಲಿ ನಾವು ಯಾವತ್ತೂ ಹಿಂಜರಿಯಬಾರದು. ಎಲ್ಲ ಬಾಹ್ಯ ಸಂಗತಿಗಳ ಹೊರತಾಗಿಯೂ ನಾವು ಅವರಿಗೆ ನೈತಿಕತೆ, ಮೌಲ್ಯಗಳು, ಸಿದ್ಧಾಂತ, ಸಂಸ್ಕೃತಿ, ಭಾಷೆ ಮತ್ತು ಉತ್ತಮ ನಡವಳಿಕೆಯ ಬಗ್ಗೆ ಮನವರಿಕೆ ಮಾಡಿಕೊಡುವ ಪ್ರಯತ್ನಗಳನ್ನು ಮಾಡಬೇಕು. ಅವರು ತಮ್ಮ ಜೀವನದಲ್ಲಿ ಉತ್ತಮ ಸಾಧನೆ ಮಾಡಲಿ ಬಿಡಲಿ, ಅವರ ಮೇಲೆ ಅತ್ಯಂತ ಪರಿಣಾಮಕಾರಿಯಾದ ಪ್ರಭಾವ ಬೀರುವುದು ಹಣಕಾಸಿನ ನಿರ್ವಹಣೆಯ ಕೌಶಲ್ಯ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇಂತಹ ಕೌಶಲ್ಯದ ಬಗ್ಗೆ ನಮ್ಮ ಶಿಕ್ಷಣ ವ್ಯವಸ್ಥೆ ಅಷ್ಟೇನೂ ಪ್ರಾಶಸ್ತ್ಯವನ್ನು ನೀಡುತ್ತಿಲ್ಲ. 'ಉತ್ತಮ ಹಣಕಾಸಿನ ಅಭ್ಯಾಸಗಳು' ಯಾವುವು ಎಂಬುದನ್ನು ನಮ್ಮ ಮಕ್ಕಳಿಗೆ ತಿಳಿಹೇಳುವ ಬಗ್ಗೆ ಹೆಚ್ಚಿನ ಪಾಲಕರು ಆಸಕ್ತಿಯನ್ನೂ ತೋರಿಸುತ್ತಿಲ್ಲ. ತಾವು ಗಳಿಕೆಯನ್ನು ಮಾಡುತ್ತಿದ್ದರೂ ಕೂಡ ಅನೇಕ ಸಂಗತಿಗಳು ಮಕ್ಕಳ ಗಮನಕ್ಕೇ ಬಂದಿರುವುದಿಲ್ಲ. ಜೀವನದಲ್ಲಿ ಹಣಕ್ಕೆ ಬಹುದೊಡ್ಡ ಮೌಲ್ಯವಿದೆ. ಅದು ಮಾಡುವ ಪ್ರತಿಯೊಂದು ಕೆಲಸದ ಕೇಂದ್ರ ಬಿಂದು. ನಾವು ಜೀವನ ಮಾಡುವಲ್ಲಿ, ನಾವು ತಿನ್ನುವ ಆಹಾರ, ನಾವು ಧರಿಸುವ ಬಟ್ಟೆ, ನಾವು ಓಡಾಡುವ ಕಾರು, ನಾವು ಬಳಸುವ ಗ್ಯಾಜೆಟ್, ನಮ್ಮ ಆರೋಗ್ಯ ಸೌಲಭ್ಯಗಳು, ಶಿಕ್ಷಣ, ನಾವು ಇತರರಿಗೆ ನೀಡುವ ಉಡುಗೊರೆ, ಪ್ರವಾಸ, ರಜಾಕಾಲದ ವಿರಾಮ, ಮನರಂಜನೆ, ಸಮಾರಂಭಗಳು... ಎಲ್ಲದರ ಸುತ್ತಲೂ ಗಿರಕಿ ಹೊಡೆಯುವುದು ಹಣ.

ಹಣಕಾಸಿನ ವಿಚಾರದಲ್ಲಿ ನಮ್ಮ ಮಕ್ಕಳು ಉತ್ತಮ ಅಭ್ಯಾಸವನ್ನು ಇಟ್ಟುಕೊಳ್ಳದೇ ಹೋದರೆ ಅವರು ತಮ್ಮ ಭವಿಷ್ಯದಲ್ಲಿ ಸೂಕ್ತವಾದ ಹಣಕಾಸು ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮತ್ತು ಅಂತಹ ಅಪೇಕ್ಷಿತ ನಡವಳಿಕೆಯನ್ನು ಕಾ೦ು’ು್ಢಕ’ೂಳ’್ಳವ’ಲ್ಲಿ ವಿಫಲವಾಗಬಹುದು. ದೊಡ್ಡವರಾದ ಬಳಿಕ ಅವರು ಅತಿಯಾದ ವೆಚ್ಚ ಮಾಡಿ ಕಡಿಮೆ ಉಳಿತಾಯ ಮಾಡಬಹುದು. ಹಣಕಾಸಿನ ವಿಚಾರದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾ ಹೋಗಬಹುದು. ಯಾರಾದರೂ ಒಬ್ಬ ವ್ಯಕ್ತಿಗೆ ಹಣವನ್ನು ನೀಡಿದಾಗ ಆತನಿಗೆ ಅದನ್ನು ಸರಿಯಾಗಿ ಹಿಡಿದುಕೊಳ್ಳಲು ಅಥವಾ ಸೂಕ್ತವಾಗಿ ನಿರ್ವಹಿಸಲು ಬರದೇ ಇದ್ದರೆ ಸೋರುತ್ತಿರುವ ಬಕೆಟ್‌ಗೆ ನೀರು ಹಾಕಿದಂತೆ. ಪಾಲಕತ್ವದ ಎಲ್ಲ ವಿಚಾರಗಳಲ್ಲಿ ನೀವು ಯಶಸ್ವಿಯಾದರೂ ಕೂಡ ಹಣಕಾಸಿನ ವಿಚಾರದಲ್ಲಿ ಸೋತರೆ, ಮಕ್ಕಳಿಗೆ ಹಣದ ಬಗ್ಗೆ ಸರಿಯಾದ ಪಾಠವನ್ನು ಕಲಿಸದೇ ಹೋದರೆ ಅವರ ಬದುಕಿನ ಬಹುಮುಖ್ಯ ಭಾಗವನ್ನೇ ನಿರ್ಲಕ್ಷಿಸಿದಂತೆ ಅರ್ಥ. 'ಹಣಕಾಸು ಜವಾಬ್ದಾರಿ'ಯನ್ನು ಕಲಿಸುವುದು ನಿಮ್ಮ ಆದ್ಯತೆಯಾಗಬೇಕು.

ಆದರೆ, ಈ ಹಣಕಾಸಿನ ಹೊಣೆಗಾರಿಕೆ ಹೇಗೆ ಎಂಬುದನ್ನು ಮಕ್ಕಳಿಗೆ ನೇರವಾಗಿ ಕಲಿಸಲು ಸಾಧ್ಯವೇ? ಇಲ್ಲ. ಕೆಲವು ಪಾಲಕರಿಗೆ ತಮ್ಮ ಮಕ್ಕಳ ಮುಂದೆ ಹಣಕಾಸು ವಿಚಾರವನ್ನು ಮಾತನಾಡುವುದು ಸುತಾರಾಂ ಇಷ್ಟವಿರುವುದಿಲ್ಲ. ಇನ್ನು ಕೆಲವರಿಗೆ ಮಕ್ಕಳಿಗೇಕೆ ಈ ಭಾರ ಎಂಬ ಭಾವನೆ; ಅವರು ಹಣಕಾಸಿನ ನಿರ್ವಹಣೆ ಮಾಡಲು ತೀರಾ ಚಿಕ್ಕವರು ಎಂಬ ಭಾವನೆ ಅನೇಕರಿಗೆ. "ಜೀವನದಲ್ಲಿ ಹಣ ಮುಖ್ಯವಲ್ಲ" ಎಂದು ನಾವು ಯಾವತ್ತೂ ಹೇಳುತ್ತಿರುತ್ತೇವೆ ಮತ್ತು ಅತ್ಯಂತ ಆಕ್ರಮಣಕಾರಿಯಾಗಿ ಸಂಪತ್ತನ್ನು ಸೃಷ್ಟಿಸುವವರನ್ನು ನಾವು ಕಡೆಗಣಿಸುತ್ತ ಹೋಗುತ್ತೇವೆ. ತಲೆಮಾರುಗಳ ಕಾಲದಿಂದ ಭಾರತೀಯ ಕುಟುಂಬಗಳಲ್ಲಿ ಮಕ್ಕಳ ಮನಸ್ಸಿನಲ್ಲಿಯೂ ಕೂಡ ಇದನ್ನೇ ಬಿತ್ತುತ್ತ ಬರಲಾಗಿದೆ. ಈ ಸಮಸ್ಯೆಯ ಇನ್ನೊಂದು ಭಾಗ ಏನೆಂದರೆ ಪಾಲಕರಿಗೂ ಹಣಕಾಸಿನ ಬಗ್ಗೆ ಮತ್ತು ಅದರ ಉತ್ತಮ ನಿರ್ವಹಣಾ ಕೌಶಲದ ಬಗ್ಗೆ ಅರಿವಿನ ಕೊರತೆ ಇರುತ್ತದೆ. ಆದರೆ ನೀವೊಬ್ಬ ಶಿಕ್ಷಿತ ಹೂಡಿಕೆದಾರರಾಗಿದ್ದರೆ ಮತ್ತು ಉತ್ತಮ ಹಣಕಾಸು ನಡವಳಿಕೆ ನಿಮ್ಮದಾಗಿದ್ದರೆ ನಿಮ್ಮ ಮಕ್ಕಳಿಗೆ ಸೂಕ್ತವಾದ ಪಾಠ ಮಾಡುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ವಾರೆನ್ ಬಫೆಟ್ ಹೂಡಿಕೆ ಮಾಡುವುದನ್ನು ಆರಂಭಿಸಿದ್ದು ತನ್ನ ಹನ್ನೊಂದನೇ ವಯಸ್ಸಿಗೆ. ಅಂದರೆ 1940ರ ದಶಕದಲ್ಲಿ. ಆದಾಗ್ಯೂ ತಾನು ಹೂಡಿಕೆಯನ್ನು ಆರಂಭಿಸಿದ್ದು ತೀರಾ ವಿಳಂಬವಾಯಿತು ಎಂಬುದು ಅವರ ಭಾವನೆ!



ಹಾಗಾಗಿ ಹಣದ ವಿಚಾರದಲ್ಲಿ ಇರುವ ಎಲ್ಲ ಹಳೆಯ ಮನಸ್ಥಿತಿಗಳನ್ನು ಮುರಿದು ಹಾಕಲು ಇದು ಸಕಾಲ. ಜೀವನದಲ್ಲಿ ಹಣವೊಂದೇ ಬಹಳ ಮುಖ್ಯವಾದ ಸಂಗತಿ ಅಲ್ಲದೇ ಇರಬಹುದು. ಆದರೆ ಅದು ಜೀವನದಲ್ಲಿ ಕಡಿಮೆ ಮಹತ್ವದ ಸಂಗತಿಯಂತೂ ಅಲ್ಲವೇ ಅಲ್ಲ. ಮನೆಯಲ್ಲಿ ದಿನನಿತ್ಯದ ಖರ್ಚು ವೆಚ್ಚಗಳಲ್ಲಿ ಮಕ್ಕಳನ್ನು ಒಳಗೊಳ್ಳುವಂತೆ ಮಾಡುವುದರಿಂದ ಅವರು ಕೆಲವು ಪ್ರಮುಖ ಹಣಕಾಸು ಅಂಶಗಳಲ್ಲಿ ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ನಾವು ಮಾಡುವ ಖರ್ಚುಗಳ ವಿಚಾರದಲ್ಲಿ ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳಲು ಮತ್ತು ಹಣವನ್ನು ಉಳಿತಾಯ ಮಾಡಲು ಅವರಿಗೆ ಸಾಧ್ಯವಾಗುತ್ತದೆ. ಇಂತಹ ಅಭ್ಯಾಸಗಳನ್ನು ಮಕ್ಕಳಿಗೆ ರಾತ್ರೋರಾತ್ರಿ ಕಲಿಸಲು ಸಾಧ್ಯವಿಲ್ಲ. ನಮ್ಮ ದಿನನಿತ್ಯದ ಬದುಕಿನ ಹೆಜ್ಜೆಗಳನ್ನು ಗಮನಿಸುತ್ತಲೇ ಅವರು ಅರ್ಥ ಮಾಡಿಕೊಳ್ಳುತ್ತ ಸಾಗಬೇಕು. ಹಾಗೆ ಮಾಡುತ್ತ ಹೋದರೆ ಕ್ರಮೇಣ ಉತ್ತಮ ಹಣಕಾಸು ನಿರ್ವಹಣೆ, ನಡವಳಿಕೆ ಅವರ ಜೀವನದ ಭಾಗವಾಗುತ್ತದೆ. ಪಾಲಕರು ಮಾಡುವ ಖರ್ಚುಗಳನ್ನು, ಅವರ ನಡವಳಿಕೆಗಳನ್ನು ಮಕ್ಕಳು ನೋಡುತ್ತ, ಗಮನಿಸುತ್ತ ಹೋಗುತ್ತಾರೆ. ನಮ್ಮ ಹಣಕಾಸಿನ ಮಾತುಕತೆಗಳಲ್ಲಿ ಮತ್ತು ಚಟುವಟಿಕೆಗಳಲ್ಲಿ ಅವರನ್ನು ಹೆಚ್ಚು ಹೆಚ್ಚು ಒಳಗೊಳ್ಳುವಂತೆ ಮಾಡುವುದರಿಂದ ಇದು ಸಾಧ್ಯವಾಗುತ್ತದೆ. ಅವರ ಜೀವನದ ಆರಂಭಿಕ ಹಂತದಲ್ಲಿಯೇ ಹಣಕಾಸು ವಿಚಾರಗಳನ್ನು ಮನವರಿಕೆ ಮಾಡುತ್ತ ಹೋದರೆ ಅವರು ಹಣಕಾಸಿನ ಜವಾಬ್ದಾರಿಗಳ ಬಗೆಗೆ ಉತ್ತಮ ಗ್ರಹಿಕೆಯನ್ನು ಹೊಂದಲು ಸಹಾಯವಾಗುತ್ತದೆ.

**ನಿಮ್ಮ ಮಕ್ಕಳು ಉತ್ತಮ ಹಣಕಾಸಿನ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಹೇಗೆ ಮತ್ತು ಹಣಕಾಸಿನ ಪ್ರೌಢಿಮೆಯನ್ನು ಸಾಧಿಸುವುದು ಹೇಗೆ? ಇಲ್ಲಿದೆ ಕೆಲವು ಸಲಹೆಗಳು:**

**1. ಹಣದ ಬಗ್ಗೆ ಮಾತನಾಡಿ:**

ಮಕ್ಕಳೊಂದಿಗೆ ಹಣಕಾಸಿನ ವಿಚಾರವಾಗಿ ಮಾತನಾಡುವುದೇ? ಅದು ನಿಜಕ್ಕೂ ಕಷ್ಟಸಾಧ್ಯ ಎಂದು ನಿಮಗೆ ಅನಿಸಬಹುದು. ಆದರೆ ಇಂತಹ ವಿಚಾರದ ಬಗ್ಗೆ ಮಕ್ಕಳನ್ನು ದೂರವಿಡುವುದು ಅವರಲ್ಲಿ ಗಳಿಕೆಯ, ಗಳಿಸಿದ್ದನ್ನು ನಿಭಾಯಿಸುವ, ಕಾಯ್ದಿಡುವ ಮತ್ತು ದೊಡ್ಡವರಾದಾಗ ಅದನ್ನು ಬೆಳೆಯುವಂತೆ ಮಾಡುವ ವಿಶ್ವಾಸ ಕಡಿಮೆಯಾಗುತ್ತ ಹೋಗಬಹುದು. ಒಬ್ಬ ಜವಾಬ್ದಾರಿಯುತ ಪಾಲಕನಾಗಿ ನೀವು ಕೈಗೊಂಡ ಹಣಕಾಸಿನ ತಪ್ಪು ನಿರ್ಧಾರಗಳು ಮತ್ತು ಯಶಸ್ಸಿನ ಬಗ್ಗೆ ನಿಮ್ಮ ಅನುಭವಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳುವುದರ ಜೊತೆಗೆ ಹಣದ ಬಗೆಗೆ ಇರುವ ಮೌಲ್ಯಯುತ ಅಂಶಗಳು ಮತ್ತು ಕೌಶಲಗಳನ್ನು ವಿವರಿಸುವುದು ಸೂಕ್ತ. ಒಂದು ವೇಳೆ ನಿಮ್ಮಲ್ಲಿ ಹಣಕಾಸಿನ ನಿರ್ವಹಣೆಯ ಬಗ್ಗೆ ಸಾಕಷ್ಟು ಅಗತ್ಯವಿರುವ ಜ್ಞಾನ ಇಲ್ಲವೆಂದಾದರೆ ಮಕ್ಕಳ ವಯಸ್ಸಿಗೆ ಅನುಗುಣವಾಗಿ ವೈಯಕ್ತಿಕ ಹಣಕಾಸಿನ ಅನೇಕ ಅಂಶಗಳನ್ನು ಅವರಿಗೆ ಅರಿವಾಗುವಂತೆ ಮಾಡಲು ಪ್ರಯತ್ನ ಮಾಡಬಹುದು.

**2. ಬಜೆಟ್ ಮತ್ತು ಉಳಿತಾಯದ ಪಾಠ:**

ಪಾಲಕರು ಕೇಳಿದ್ದನ್ನೆಲ್ಲ ಒದಗಿಸುತ್ತಾರೆ ಎಂಬ ಮನಸ್ಥಿತಿ ಮಕ್ಕಳಿಗೆ ಬಂದು ಬಿಟ್ಟರೆ ಅವರು ಯಾವುದೇ ಅಳುಕು ಕೂಡ ಇಲ್ಲದೇ ತಮ್ಮ ಬೇಡಿಕೆಗಳನ್ನು ಮಂಡಿಸಲು ಶುರುಮಾಡುತ್ತಾರೆ. ಅವರ ಬೇಡಿಕೆಗಳಿಗೆ ನೀವು ಸೊಪ್ಪು ಹಾಕದೇ ಹೋದಾಗ ಅವರು ಕೋಪಗೊಳ್ಳುವ ಅಥವಾ ದುಃಖಿಸುವ ಸಾಧ್ಯತೆ ಇರುತ್ತದೆ. ಇದನ್ನು ನಿಲ್ಲಿಸಲು ಅವರಿಗೆ ಹಣದ ಉಳಿತಾಯದ ಬಗ್ಗೆ ಮತ್ತು ಅದಕ್ಕೊಂದು ಬಜೆಟ್ ಮಾಡುವ ಬಗ್ಗೆ ವಿವರಿಸಿ. ಅದನ್ನೆಲ್ಲ ಅವರೇ ನಿರ್ವಹಿಸಿ ಅನುಭವವಾಗುವಂತೆ ಮಾಡಿ. ಆಗಾಗ ಅವರಿಗೆ 'ಪಾಕೆಟ್ ಮನಿ'ಯನ್ನು ನೀಡುತ್ತ ಮತ್ತು ಕೆಲವೊಮ್ಮೆ ಹೆಚ್ಚುವರಿ ಹಣವನ್ನು ಕೊಟ್ಟು ಇದರಲ್ಲಿ ಉಳಿತಾಯ ಮಾಡಿ ನಿನಗೆ ಬೇಕಾದ ವಸ್ತುಗಳನ್ನು ನೀನೇ ಖರೀದಿ ಮಾಡು ಎಂದು ಸಲಹೆ ನೀಡಬೇಕು. ಅವರು ತಾವು ಕೊಳ್ಳಬೇಕಾದ ವಸ್ತುವಿನ ಬಗ್ಗೆ ಕಠಿಣವಾದ ನಿರ್ಧಾರಗಳನ್ನು ಕೈಗೊಂಡು ನಗದಿನ ಹರಿವಿಗೆ ತಕ್ಕಂತೆ ಆದ್ಯತೆಗಳನ್ನು ರೂಪಿಸಲು ಪ್ರಯತ್ನಿಸಲಿ. ಹಣದ ವಿಷಯದಲ್ಲಿ ತಮ್ಮ ನಡವಳಿಕೆಗಳು

ಹೇಗಿರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ತಾವು ಕೈಗೊಂಡ ನಿರ್ಧಾರಗಳನ್ನೆಲ್ಲ ದಾಖಲೆ ಮಾಡುವಂತೆ ತಿಳಿಸಿ. ಇಂತಹ ಕ್ರಮಗಳ ಮೂಲಕ ಅವರು ತಮ್ಮ ಗುರಿಗಳನ್ನು ಸಾಧಿಸಲು ಮಾಡಿದ ಪ್ರಯತ್ನ ಹಾಗೂ ಅದರಿಂದ ಸಿಕ್ಕ ಫಲವನ್ನು ಅವರು ಎಂದಿಗೂ ಮರೆಯುವುದಿಲ್ಲ.

**3. ಸವಾಲುಗಳಿಂದ ಕಲಿಯಲಿ:** ಮಕ್ಕಳು ತಾವೇ ಹಣವನ್ನು ಗಳಿಸಲು ಆರಂಭಿಸಿದಾಗ ಅದರಿಂದ ಸ್ವಾವಲಂಬಿಯಾಗಿ ಮತ್ತು ಸ್ವತಂತ್ರವಾಗಿ ಬದುಕುವುದು ಹೇಗೆ ಎಂಬುದನ್ನು ಕಲಿಯುತ್ತಾರೆ. ಮಕ್ಕಳಿಗೆ ಯಾವತ್ತೂ ಕೆಲವು ಟಾಸ್ಕ್‌ಗಳನ್ನು ನೀಡಿ; ಅವರ ರೂಮ್‌ನ್ನು ಅವರೇ ಸ್ವಚ್ಛಗೊಳಿಸುವುದು, ಉತ್ತಮ ಅಂಕಗಳನ್ನು ಗಳಿಸುವುದು, ಅತ್ಯುತ್ತಮವಾದ ಬುಕ್‌ಗಳನ್ನು ಓದುವುದು, ಯಾವುದಾದರೂ ಪ್ರಬಂಧ ಮಂಡನೆಯನ್ನು ಮಾಡುವುದು, ಯಾವುದಾದರೂ ರಚನಾತ್ಮಕ ಕಾರ್ಯವನ್ನು ನಿರ್ವಹಿಸುವುದು ಇತ್ಯಾದಿ. ಇಂತಹ ಕೆಲಸಗಳನ್ನು ಅವರು ಪೂರ್ತಿಗೊಳಿಸಿದಾಗ ಬಹುಮಾನವನ್ನು ನೀಡಿ. ಅದು ಅವರ ಬಜೆಟ್ ನಿರ್ವಹಿಸಲು ಪಿಗ್ಗಿ ಬ್ಯಾಂಕ್‌ಗೆ ಬೇಕಾಗಿರುವ ಹೆಚ್ಚುವರಿ ಹಣ ಕೂಡ ಇರಬಹುದು. ಇದರಿಂದ ಮಕ್ಕಳು ಕೇವಲ ಕಲಿಯುವುದು ಮಾತ್ರವಲ್ಲದೆ ತಮ್ಮ ಕಠಿಣ ಶ್ರಮಕ್ಕೆ ಮತ್ತು ಅದರಿಂದ ಗಳಿಸಿದ ಬಹುಮಾನಕ್ಕೆ ಹೆಚ್ಚಿನ ಮೌಲ್ಯವನ್ನು ನೀಡುತ್ತಾರೆ.

**4. ಹೂಡಿಕೆಯ ಅನುಭವ ಪಡೆಯಲಿ:** ಕೈಯಲ್ಲಿ ಹಣವಿದ್ದಾಗ ಅದನ್ನು ಉಳಿತಾಯ ಮಾಡುವುದು ಸಾಮಾನ್ಯ ಸಂಗತಿಯಲ್ಲ. ಆದರೆ ನಿಮ್ಮ ಮಕ್ಕಳು ಸಂಪತ್ತಿನ ಸೌಧವನ್ನು ಕಟ್ಟುವುದು ಹೇಗೆ ಎಂಬುದನ್ನು ಕಲಿಯಲು ಅವರಿಗೆ 'ಹೂಡಿಕೆ'ಯ ಪರಿಕಲ್ಪನೆಯನ್ನು ಪರಿಚಯ ಮಾಡಿಸಿ. ಹೂಡಿಕೆಯ ಮೂಲಕ ಹಣವು ಹೇಗೆ ಬೆಳವಣಿಗೆಯನ್ನು ಕಾಣುತ್ತದೆ ಎಂಬುದನ್ನು ಅವರಿಗೆ ತೋರಿಸಲು ಅವರ ಹೆಸರಿನಲ್ಲಿ ನಾನಾ ಆಸ್ತಿಗಳು/ಉತ್ಪನ್ನಗಳಲ್ಲಿ ಸಣ್ಣ ಸಣ್ಣ ಹೂಡಿಕೆಗಳನ್ನು ಮಾಡುವಂತೆ ಮತ್ತು ಅದರ ಬೆಳವಣಿಗೆಯನ್ನು ಅವರೇ ಗಮನಿಸುವಂತೆ ಮಾಡಿ. ಹೀಗೆ ಮಾಡುವ ಹೂಡಿಕೆಗಳಿಗೆ ಅವರೇ ಅವಕಾಶಗಳನ್ನು ಹುಡುಕುವಂತಹ ದಾರಿಯನ್ನು ತೋರಿಸಿ. ನಾನಾ ಆಸ್ತಿಗಳು, ಉತ್ಪನ್ನಗಳ ಹುಡುಕಾಟದಿಂದ ಅವರು ಗಳಿಸುವ ಅನುಭವ ದೊಡ್ಡದು. ಇಂತಹ ಕಲಿಕೆಗಳು ಅವರ ಪಾಲಿಗೆ ಬದುಕಿನ ಬಹುದೊಡ್ಡ ತಿರುವುಗಳಾಗಿರುತ್ತವೆ. ಈ ವಯಸ್ಸಿನಲ್ಲಿ ಅವರು ಮಾಡುವ ತಪ್ಪುಗಳು ಭವಿಷ್ಯದಲ್ಲಿ ಎಚ್ಚರಿಕೆ ವಹಿಸುವಂತೆ ಮಾಡುತ್ತದೆ. ಇಂತಹ ಪ್ರಕ್ರಿಯೆಗಳಿಂದಾಗಿ ನಿಮ್ಮ ಮಕ್ಕಳು ತಮ್ಮ ಗಳಿಕೆಯನ್ನು ಆರಂಭಿಸುವುದಕ್ಕೂ ಮುನ್ನ ಸಣ್ಣ ಮೊತ್ತದ ಹಣವನ್ನು ಸಂಗ್ರಹಿಸಲು ಕಲಿತಿರುತ್ತಾರೆ.

**ಕೊನೆಯ ಮಾತು:** ಹಣಕಾಸಿನ ಭದ್ರತೆಯನ್ನು ಜೀವನದಲ್ಲಿ ಯಾರೂ ಅಲ್ಲಗಳೆಯುವಂತಿಲ್ಲ. ಇಂದಿನ ಕಾಲಘಟ್ಟದಲ್ಲಂತೂ ಅದು ಹೆಚ್ಚು ಹೆಚ್ಚು ಅಗತ್ಯ ಕೂಡ ಹೌದು. ಹಾಗಾಗಿ ಮಕ್ಕಳನ್ನು ಈ ಹಂತದಲ್ಲಿಯೇ ಹಣಕಾಸಿನ ವಿಚಾರದಲ್ಲಿ ಜವಾಬ್ದಾರಿಯುತರನ್ನಾಗಿ ಮಾಡುವುದು ಉತ್ತಮ ಕ್ರಮ. ನಿಮ್ಮ ಮಗುವನ್ನು ಸ್ಮಾರ್ಟ್, ಅನುಭವೀ ಹಾಗೂ ಜ್ಞಾನವಂತನನ್ನಾಗಿ ಮಾಡಲು ಎಲ್ಲ ಸಂಕೀರ್ಣ ಹಣಕಾಸಿನ ಅಲೆಗಳನ್ನು ಸಮರ್ಥವಾಗಿ ಎದುರಿಸಿ ದಡ ಸೇರಲು ಈಗಿನಿಂದಲೇ ಈಜು ಕಲಿಯುವಂತೆ ಮಾಡುವ ಜವಾಬ್ದಾರಿ ಪಾಲಕರದ್ದಾಗಿರುತ್ತದೆ. ನಿಮ್ಮ ಮನೆಯಲ್ಲಿ ಸೂಕ್ತ ವಯಸ್ಸಿನ ಮಕ್ಕಳು ಇದ್ದರೆ ವೈಯಕ್ತಿಕ ಹಣಕಾಸಿನಲ್ಲಿ ಅವರು ತಮ್ಮದೇ ಆದ ಪ್ರಯಾಣವನ್ನು ಆರಂಭಿಸುವಂತೆ ಮಾಡಲು ಇದು ಸಕಾಲ.



# ಅಗ್ನಿ ವಿಮಾ ಪಾಲಿಸಿ

## ಸುಡದಿರಲಿ ನಿಮ್ಮ ಸಂಪತ್ತು

ಅಗ್ನಿ ಅವಘಡ ಸಂಭವಿಸಿದಾಗ ಮೊದಲು ಉದ್ಭವಿಸುವ ಪ್ರಶ್ನೆ ಏನೆಂದರೆ ನಿಮ್ಮ ಆಸ್ತಿಗೆ ಅಗ್ನಿ ವಿಮಾ ಪಾಲಿಸಿ ಮಾಡಿಸಿದ್ದೀರಾ? ಎಂಬುದು. ಸಾಮಾನ್ಯವಾಗಿ ಇದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಹಾಗಂತ ಇದೊಂದು ಕಡೆಗಣಿಸುವಂತಹ ವಿಮಾ ಪಾಲಿಸಿಯಲ್ಲ. ಯಾವುದೇ ಒಬ್ಬ ವ್ಯಕ್ತಿ/ಸಂಸ್ಥೆ/ ಸಂಘಟನೆಯ ಆಸ್ತಿಗೆ/ಸೊತ್ತಿಗೆ ಈ ಪಾಲಿಸಿ ಮಾಡಿದರೆ ಅಗ್ನಿ ಅವಘಡದಿಂದ ಸಂಭವಿಸುವ ಹಣಕಾಸಿನ ನಷ್ಟವನ್ನು ಭರ್ತಿ ಮಾಡಿಕೊಡಲು ಅನುಕೂಲವಾಗುತ್ತದೆ.

ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ ಅಥವಾ ಕಚೇರಿಯನ್ನು ರೂಪಿಸುವ ಸಂದರ್ಭದಲ್ಲಿ ಅಗ್ನಿ ಅವಘಡಕ್ಕೆ ಪ್ರತಿಯಾಗಿ ವಿಮಾ ಪಾಲಿಸಿಯನ್ನು ಅತ್ಯಗತ್ಯವಾಗಿ ಮಾಡಿಸಿರುತ್ತಾರೆ. ಬೆಂಕಿ ಆಕಸ್ಮಿಕ, ಸ್ಫೋಟ, ಅಂತಃಸ್ಫೋಟ, ನೈಸರ್ಗಿಕ ವಿಕೋಪಗಳು ಇತ್ಯಾದಿ ಘಟನೆಗಳಿಂದ ಈ ವಿಮಾ ಪಾಲಿಸಿಯಲ್ಲಿ ಭದ್ರತೆ ಸಿಗುತ್ತದೆ. ಅಗ್ನಿ ಅವಘಡದಲ್ಲಿ ನಾಶವಾದ ಅಥವಾ ಹಾನಿಗೆ ಒಳಗಾದ ಸೊತ್ತಿನ ದುರಸ್ತಿಗೆ, ಮರು ನಿರ್ಮಾಣ ಮಾಡಲು ಅಥವಾ ಬದಲಿ ವ್ಯವಸ್ಥೆಯನ್ನು ಮಾಡಲು ಬೇಕಾದ ಹಣವನ್ನು ಈ ವಿಮೆಯಲ್ಲಿ ಮರುಭರ್ತಿ ಮಾಡಿಕೊಡಲಾಗುತ್ತದೆ.

ಈ ಅಗ್ನಿ ವಿಮಾ ಪಾಲಿಸಿಗಳಲ್ಲಿ ಇರುವ ವಿಧಗಳನ್ನು ಗಮನಿಸೋಣ:

ಪ್ರಮಾಣಿತ ಮಟ್ಟದ ಅಗ್ನಿ ಆಕಸ್ಮಿಕ ಮತ್ತು ವಿಶೇಷ ಅವಘಡ ವಿಮೆ– ಇದನ್ನು ಎಸ್‌ಎಫ್‌ಎಸ್‌ಪಿ ಪಾಲಿಸಿ ಎಂದು ಕರೆಯಲಾಗುತ್ತದೆ ಮತ್ತು ಈ ವಿಮಾ ಪಾಲಿಸಿಯಲ್ಲಿ ಈ ಕೆಳಗಿನ ಅಪಾಯಗಳು ಒಳಗೊಂಡಿರುತ್ತವೆ:

• ಬೆಂಕಿ •ಮಿಂಚು •ಸ್ಫೋಟ/ಅಂತಃಸ್ಫೋಟ •ಗಲಭೆ, ಮುಷ್ಕರ ಮತ್ತು ದುರುದ್ದೇಶಪೂರಿತ ಹಾನಿ (ಆರ್‌ಎಸ್‌ಎಂಡಿ) •ಪ್ರವಾಹ, ಬಿರುಗಾಳಿ, ಚಂಡಮಾರುತ, ತೂಫಾನು, ಹರಿಕೇನ್, ಸುಂಟರಗಾಳಿ, ಪ್ರವಾಹದಲ್ಲಿ ಮುಳುಗಡೆಯಾಗುವುದು (ಎಸ್‌ಟಿಎಫ್‌ಐ) •ವೈಮಾನಿಕ ಹಾನಿ •ಹೊಡೆತದಿಂದಾಗುವ ಹಾನಿ •ನೆರೆ ಇಳಿಕೆ ಮತ್ತು ಭೂಕುಸಿತ–ಬಂಡೆ ಕುಸಿತವೂ ಸೇರಿ

ಮೇಲೆ ಮಾಡಿರುವ ಪಟ್ಟಿಯು ಪ್ರಮುಖ ಸೌಲಭ್ಯಗಳನ್ನು ಮಾತ್ರ ಒಳಗೊಂಡಿವೆ. ಪೂರ್ತಿ ಸೌಲಭ್ಯಗಳನ್ನು (ಕವರೇಜ್) ಪಾಲಿಸಿಯ ದಾಖಲೆಯಲ್ಲಿ ಪರಿಶೀಲಿಸಬಹುದಾಗಿದೆ. ಈ ಸಾಮಾನ್ಯ ಸೌಲಭ್ಯಗಳ ಜೊತೆಗೆ ಹೆಚ್ಚುವರಿ ಪ್ರೀಮಿಯಂ ಪಾವತಿ ಮಾಡಿ ಹೆಚ್ಚುವರಿ ಸೇವೆಗಳನ್ನು ಸೇರಿಸಿಕೊಳ್ಳಬಹುದು. ಕೆಲವು ವಿಮಾ ಕಂಪನಿಗಳು ಪಾಲಿಸಿಯ ಆರಂಭದಲ್ಲಿ ಆರ್‌ಎಸ್‌ಎಂಡಿ ಮತ್ತು ಎಸ್‌ಟಿಎಫ್‌ಐ ಅವಘಡಗಳ ಸೌಲಭ್ಯವನ್ನು ತೆಗೆದು ಇನ್ನಷ್ಟು ಸುಲಭವಾಗುವಂತೆ ಮಾಡುತ್ತವೆ ಮತ್ತು ಪ್ರೀಮಿಯಂ ಮೊತ್ತದಲ್ಲಿ ಕಡಿತ ಕೂಡ ಮಾಡುತ್ತವೆ.

### ವಿಶೇಷ ಕಾರ್ಯಕ್ರಮಗಳು

**ಫ್ಲೋಟರ್ ಪಾಲಿಸಿ:** ಒಂದೇ ಪಾಲಿಸಿದಾರರು ಬೇರೆ ಬೇರೆ ಸ್ಥಳಗಳಲ್ಲಿ ಹೊಂದಿರುವ ಗೋದಾಮುಗಳಲ್ಲಿ ಸಂಗ್ರಹಿಸಿಟ್ಟಿದ್ದ ಸರಕುಗಳಿಗೆ ಈ ಪಾಲಿಸಿ ಅನ್ವಯವಾಗುತ್ತದೆ. ಒಂದು ಗೋದಾಮಿನಿಂದ ಇನ್ನೊಂದು ಗೋದಾಮಿಗೆ ಸರಕುಗಳನ್ನು ಆಗಾಗ ಸಾಗಿಸುವ ಸಂದರ್ಭಗಳಲ್ಲಿ ಈ ಪಾಲಿಸಿ ಹೆಚ್ಚು ಅನುಕೂಲವಾಗುತ್ತದೆ. ಇಂತಹ ಸಮಯದಲ್ಲಿ ಸರಕಿನ ಪ್ರತಿಯೊಂದು ಸಾಗಣೆಯನ್ನು ದಾಖಲಿಸಲು ಸಾಧ್ಯವಿಲ್ಲ. ಪಾಲಿಸಿದಾರರು ಒಂದು ಸಮಾನ ಮೊಬಲಗಿಗೆ ವಿಮೆಯನ್ನು ಮಾಡಿದರೆ ಅದು ಎಲ್ಲ ಗೋದಾಮುಗಳಿಗೆ ಅನ್ವಯವಾಗುತ್ತದೆ.

**ಘೋಷಣಾ ಪಾಲಿಸಿ:**

ಸರಕುಗಳು/ದಾಸ್ತಾನಿನ ಮೌಲ್ಯಗಳಲ್ಲಿ ನಿರಂತರ ಏರಿಳಿತಗಳಾಗುವ ಸಂದರ್ಭಗಳಲ್ಲಿ ಈ ಪಾಲಿಸಿ ಹೆಚ್ಚು ಉಪಯುಕ್ತ. ಪೂರ್ವ ಒಪ್ಪಂದಿತ ನಿಯಮಗಳ ಪ್ರಕಾರ ಸರಕುಗಳ ಮೌಲ್ಯವನ್ನು ಕಾಲಕಾಲಕ್ಕೆ ಅಂದರೆ ತ್ರೈಮಾಸಿಕ ಅಥವಾ ಮಾಸಿಕ ಆಧಾರದಲ್ಲಿ ಘೋಷಿಸಬೇಕು. ಪಾಲಿಸಿಯ ಪ್ರೀಮಿಯಂನ್ನು ವರ್ಷದ ಕೊನೆಯಲ್ಲಿ ಘೋಷಣೆ ಮಾಡಲಾದ ಸರಾಸರಿ ಮೌಲ್ಯದ ಮೇಲೆ ಲೆಕ್ಕ ಹಾಕಲಾಗುತ್ತದೆ.

**ಫ್ಲೋಟರ್ ಘೋಷಣಾ ಪಾಲಿಸಿ:** ಇದು ಮೇಲಿನ ಎರಡು ಪಾಲಿಸಿಗಳ ಸಂಯೋಜನೆ. ಅಂದರೆ ಅನೇಕ ಸ್ಥಳಗಳಲ್ಲಿರುವ ಸರಕುಗಳು ಮತ್ತು ಒಂದು ಗೋದಾಮಿನಿಂದ ಇನ್ನೊಂದಕ್ಕೆ ಚಲಿಸುವ ಸರಕುಗಳ ಮೌಲ್ಯ.

**ಆಸ್ಪತ್ರೆಯಿಂದ ಬಿಡುಗಡೆಯ ಬಳಿಕ:** ಅವಘಡ ಸಂಭವಿಸಿದಾಗ ಗಾಯಗೊಂಡ ಅಥವಾ ಅಸ್ವಸ್ಥರಾದ ಅಥವಾ ರೋಗಕ್ಕೆ ಒಳಗಾದ ವ್ಯಕ್ತಿಗಳ ವೈದ್ಯಕೀಯ ವೆಚ್ಚವನ್ನು ಇದು ಭರಿಸುತ್ತದೆ. ವಿಮಾದಾರನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ತಕ್ಷಣ ಒಂದು ನಿರ್ದಿಷ್ಟ ದಿನಗಳ ವರೆಗೆ ಇದು ಅನ್ವಯವಾಗುತ್ತದೆ.

### ಯಾಕೆ ಬೇಕು ಅಗ್ನಿ ವಿಮಾ ಪಾಲಿಸಿ?

ಆಕಸ್ಮಿಕ ಎನ್ನುವುದು ಯಾವತ್ತೂ ಆಕಸ್ಮಿಕವೇ. ಒಂದು ಅಪಘಾತವಿರಲಿ, ನೈಸರ್ಗಿಕ ವಿಪತ್ತಿರಲಿ ಅದು ಯಾವಾಗ ಬೇಕಿದ್ದರೂ ಎಲ್ಲಿ ಬೇಕಿದ್ದರೂ ಸಂಭವಿಸಿ ಬಿಡಬಹುದು. ಇದರಿಂದ ಜನರ ಆಸ್ತಿ-ಪಾಸ್ತಿಗೆ ಬೃಹತ್ ಪ್ರಮಾಣದಲ್ಲಿ ಹಾನಿ ಮತ್ತು ನಷ್ಟವನ್ನು ಉಂಟುಮಾಡುತ್ತದೆ. ಮನೆ, ಕಚೇರಿ, ಅಂಗಡಿ-ಮುಂಗಟ್ಟುಗಳು, ಕೈಗಾರಿಕೆಗಳು/ಫ್ಯಾಕ್ಟರಿಗಳು/ಶೋರೂಮ್‌ಗಳಂತಹ ಆಸ್ತಿ-ಪಾಸ್ತಿಗಳನ್ನು ನಿರ್ಮಾಣ ಮಾಡಲು ವರ್ಷಗಳ ಕಠಿಣ ಶ್ರಮ ಬೇಕಾಗುತ್ತದೆ. ಅವೆಲ್ಲವೂ ಒಂದೇ ಒಂದು ಘಟನೆಯಿಂದ ನಾಶವಾಗಿ ಹೋಗಬಹುದು. ಬೃಹತ್ ಘಟಕ ಮತ್ತು ಯಂತ್ರಗಳಿಗೆ ಹೂಡಿಕೆಗಳನ್ನು ಮಾಡಿ ನಿರ್ಮಿಸಲಾಗುವ ಕೈಗಾರಿಕೆಗಳಿಗೆ ಇಂತಹ ಘಟನೆಗಳು ನಿಜಕ್ಕೂ ಗಂಭೀರ ಸ್ವರೂಪದ ಆಘಾತವನ್ನು ಉಂಟುಮಾಡುತ್ತವೆ ಎನ್ನುವುದರಲ್ಲಿ ಅನುಮಾನವಿಲ್ಲ. ಕೆಲವು ಪ್ರಕರಣಗಳಲ್ಲಿ ಇದರ ಮಾಲೀಕರು ಹಣಕಾಸಿನ ಒತ್ತಡಕ್ಕೆ ಒಳಗಾಗಬಹುದು ಅಥವಾ ದೀವಾಳಿಯಾಗಿ ಹೋಗಬಹುದು. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಅಂತಹ ಆಸ್ತಿ-ಪಾಸ್ತಿಗಳ ಪಾಲಿಗೆ ಸುರಕ್ಷಾ ಕವಚವಾಗಿರುವ ಸಮಗ್ರ ಅಗ್ನಿ ವಿಮಾ ಪಾಲಿಸಿ ಹೊಂದುವುದು ಮುಖ್ಯ.

### ಪ್ರಮಾಣಿತವಾದ ಅಗ್ನಿ ವಿಮಾ ಪಾಲಿಸಿ ಮಾಡುವುದರ ಲಾಭವೇನು?

**ಹಣಕಾಸಿನ ಸುರಕ್ಷತೆ:** ಬೆಂಕಿ ಆಕಸ್ಮಿಕ ಮತ್ತಿತರ ಅವಘಡಗಳಿಂದ ಕಟ್ಟಡಗಳು, ಘಟಕಗಳು ಮತ್ತು ಯಂತ್ರಗಳು, ಸರಕುಗಳು/ ದಾಸ್ತಾನುಗಳಿಗೆ ಹಾನಿ ಸಂಭವಿಸಿದರೆ ಅದನ್ನು ಮರುಸ್ಥಾಪನೆ ಮಾಡಲು ಅಗ್ನಿ ವಿಮಾ ಪಾಲಿಸಿಯಲ್ಲಿ ಮರುಭರ್ತಿ ಮಾಡಿಕೊಡಲಾಗುತ್ತದೆ. ಇಂತಹ ಪಾಲಿಸಿಯನ್ನು ಹೊಂದುವುದರಿಂದ ವಿಮಾ ಪಾಲಿಸಿದಾರನು ಆರ್ಥಿಕವಾಗಿ ಹಿಂದಿದ್ದ ಸ್ಥಿತಿಗೆ ಮರಳಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಗ್ನಿ ವಿಮಾ ಪಾಲಿಸಿಯು ಹಣಕಾಸು ಭದ್ರತೆಯನ್ನು ಕಲ್ಪಿಸಿ, ಆಸ್ತಿಗೆ ಸುರಕ್ಷತೆಯನ್ನು ಒದಗಿಸುತ್ತದೆ.

**ವ್ಯಾಪಕ ಕವರೇಜ್ (ಸೌಲಭ್ಯಗಳು):** ಪ್ರಮಾಣಿತ ಅಗ್ನಿ ವಿಮಾ ಪಾಲಿಸಿಯಲ್ಲಿನ ಸೌಲಭ್ಯಗಳು ಕೇವಲ ಅಗ್ನಿ ಸಂಬಂಧಿತ ಹಾನಿಗೆ ಮಾತ್ರ ಸೀಮಿತವಾಗಿಲ್ಲ. ಇದು ಅನೇಕ ರೀತಿಯ ಅಪಾಯಗಳಿಗೆ ಸುರಕ್ಷತೆಯನ್ನು ನೀಡುತ್ತದೆ; ಗಲಭೆ, ಮುಷ್ಕರ ಮತ್ತು ದುರುದ್ದೇಶಪೂರಿತ ಹಾನಿ, ಪ್ರವಾಹ, ಚಂಡಮಾರುತ, ಬಿರುಗಾಳಿ, ತೂಫಾನ್, ಹರಿಕೇನ್, ಸ್ಫೋಟ/ಅಂತಃಸ್ಫೋಟ, ಮಿಂಚು ಮುಂತಾದ ಅಪಾಯಗಳು ಇದರಲ್ಲಿ ಸೇರಿವೆ. ಸಮಗ್ರವಾದ ಕವರೇಜ್ ಹೊಂದಿರುವ ಪಾಲಿಸಿ ಮನಸ್ಸಿಗೆ ನೆಮ್ಮದಿಯನ್ನು ನೀಡುತ್ತದೆ.

**ಹೆಚ್ಚುವರಿ ಸೌಲಭ್ಯಗಳು:** ವಿಮೆಗೆ ಒಳಪಟ್ಟ ಗಂಡಾಂತರಗಳು ಸಂಭವಿಸಿದಾಗ ಪ್ರಮಾಣಿತ ಕವರ್ ಆಚೆಗೆ ಅನೇಕ ನಷ್ಟ ಮತ್ತು ವೆಚ್ಚಗಳು ಉಂಟಾಗುತ್ತವೆ. ಆದರೆ ಅವು ಈ ಪಾಲಿಸಿಯಲ್ಲಿ ಒಳಗೊಂಡಿರುವುದಿಲ್ಲ. ಉದಾಹರಣೆಗೆ, ಅಗ್ನಿ ದುರಂತದಿಂದ ಘಟಕ/ಕೈಗಾರಿಕೆ ನಾಶವಾದ ಸಂದರ್ಭದಲ್ಲಿ ಆಸ್ತಿಯ ಮೇಲೆ ಭಾರೀ ಅವಶೇಷಗಳ ರಾಶಿ ಬಿದ್ದಿರುತ್ತದೆ. ಅಂತಹ ರಾಶಿಯನ್ನು ತೆರವುಗೊಳಿಸುವುದೇ ಅತ್ಯಂತ ವೆಚ್ಚದಾಯಕ. ಅವಶೇಷಗಳ ತೆರವು ವೆಚ್ಚಗಳನ್ನು ಈ ವ್ಯಾಪ್ತಿಯಲ್ಲಿ ತರಬಹುದು.

**4. ವ್ಯಾಪಾರಕ್ಕೆ ತಡೆ/ಲಾಭದ ನಷ್ಟ ವಿಮೆ:** ಪ್ರಮಾಣಿತ ವಿಮಾ ಪಾಲಿಸಿಯ ಜೊತೆ ವ್ಯಾಪಾರಕ್ಕೆ ಉಂಟಾದ ತಡೆ ಅಥವಾ ಲಾಭದಲ್ಲಿ ಉಂಟಾದ ನಷ್ಟವನ್ನು ಸೇರಿಸಬಹುದು. ಅವಘಡ ಸಂಭವಿಸಿದಾಗ ಉಂಟಾದ ಹಾನಿಯಿಂದ ವ್ಯಾಪಾರ ಅನುಭವಿಸಿದ ಲಾಭದಲ್ಲಿನ ಕುಸಿತವನ್ನು ತುಂಬಿಕೊಡುವ ಸೌಲಭ್ಯವನ್ನು ಇದು ಹೊಂದಿದೆ. ಬೆಂಕಿ ಆಕಸ್ಮಿಕ ಸಂಭವಿಸಿದಾಗ ವಹಿವಾಟು ಇರುವುದಿಲ್ಲ. ಹಾಗಿದ್ದೂ ಬಾಡಿಗೆ, ವೇತನ, ಸಾಲದ ಮೇಲಿನ ಬಡ್ಡಿ ಪಾವತಿಗಳಂತಹ ನಿಶ್ಚಿತ ವೆಚ್ಚಗಳನ್ನು ಮಾಲೀಕರು ಭರಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಈ ಪಾಲಿಸಿಗಳು ನೆರವಿಗೆ ಬರುತ್ತವೆ.

**ಸಾಲದ ಸುಲಭ ಲಭ್ಯತೆ:** ಅಂಗಡಿ-ಮುಂಗಟ್ಟುಗಳು, ತಯಾರಕರು/ ಫ್ಯಾಕ್ಟರಿಗಳು ಮತ್ತು ಗೋದಾಮುಗಳ ದಾಸ್ತಾನುಗಳ ಮೇಲೆ ಸಾಲವನ್ನು ನೀಡುವವರು ಈ ಆಸ್ತಿಯ ಸುರಕ್ಷತೆಗೆ ಅಗ್ನಿ ವಿಮಾ ಪಾಲಿಸಿಯನ್ನು ಕೇಳುತ್ತಾರೆ. ಸಮಗ್ರ ಅಗ್ನಿ ವಿಮಾ ಪಾಲಿಸಿಯು ಸಾಲ ನೀಡುವವನಿಗೂ ಕೂಡ ಮಾನಸಿಕ ನೆಮ್ಮದಿ ನೀಡುತ್ತದೆ. ಇದರಿಂದ ಸಾಲ ಸಿಗುವುದು ಕೂಡ ಸುಲಭವಾಗುತ್ತದೆ.

### ಅಗ್ನಿ ವಿಮಾ ಪಾಲಿಸಿ ಅಡಿಯಲ್ಲಿ ಯಾವುದೆಲ್ಲ ಒಳಗೊಳ್ಳುವುದಿಲ್ಲ?

ಸಾಮಾನ್ಯವಾಗಿ ಹೊರತಾಗಿರುವ ಅಂಶಗಳು:

- ಪಾಲಿಸಿಯ ಅಡಿಯಲ್ಲಿ ಒಳಗೊಂಡಿರುವ ಮಿಂಚು, ಎಸ್‌ಟಿಎಫ್‌ಐ, ಭೂಕುಸಿತ, ಬಂಡೆ ಕುಸಿತದಂತಹ ಘಟನೆಗಳಿಂದ ಉಂಟಾದ ಪ್ರತಿಯೊಂದು ನಷ್ಟದಲ್ಲಿ ಕನಿಷ್ಠ 10000 ರೂ.ಗೆ ಒಳಪಟ್ಟು ಪ್ರತಿ ಕ್ಲೈಮ್ (ಕ್ಲೈಮ್‌ನ ಹೆಚ್ಚುವರಿ ಎಂದು ಕರೆಯಲಾಗುತ್ತದೆ)ನ ಮೊದಲ ಶೇ.5ರಷ್ಟನ್ನು ಹೊರಗಿಡಲಾಗಿದೆ. ಇದು ಪ್ರತಿ ವಿಮೆಗೆ ಪ್ರತಿ ಘಟನೆಗೆ ಅನ್ವಯವಾಗುತ್ತದೆ.
- ಪರಮಾಣು, ಯುದ್ಧ, ಭಯೋತ್ಪಾದನೆ ಮತ್ತು ಈ ರೀತಿಯ ಅಪಾಯಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಉಂಟಾದ ನಷ್ಟ, ವಿಧ್ವಂಸ ಅಥವಾ ಹಾನಿ.
- ಗಳಿಕೆಯಲ್ಲಿ ಆಗಿರುವ ನಷ್ಟ, ವಿಳಂಬದಿಂದ ಆಗಿರುವ ನಷ್ಟ, ಮಾರುಕಟ್ಟೆ ನಷ್ಟ ಅಥವಾ ಇತರ ಸಾಂದರ್ಭಿಕ ನಷ್ಟ ಅಥವಾ ಹಾನಿ.

ಈ ಪಟ್ಟಿಯು ತಾತ್ಕಾಲಿಕವಾಗಿದ್ದು ಪೂರ್ಣ ಪಟ್ಟಿಯನ್ನು ಸಂಬಂಧಪಟ್ಟ ಪಾಲಿಸಿಯಲ್ಲಿ ಲಭ್ಯವಿರುತ್ತದೆ.


## ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN-79020)

ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080-42129917

Mail: info@inspireindiafs.com

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಹೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD

@ 65, 'Surasa Enclave', 1st Floor, Puttanna Road,
Gandhi Bazar, Basavanagudi, Bengaluru-560004



**ಹಕ್ಕುತ್ಯಾಗ**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.